ಪ್ರಾಣಿ ಪಕ್ಷಿಗಳನ್ನು ಮನೆಗೆ ತಂದು ಅಡಿಗೆ ಮಾಡುವುದು ಒಂದು ವಾಡಿಕೆಯಾಗಿತ್ತು. ಆದರೆ ಇಂದು ಕೆಡ್ಡಸದ ಈ ಒಂದು ಭಾಗ ಬದಲಾಗಿದೆ.

ಕಾಡು ಪ್ರಾಣಿಗಳ ಸಂರಕ್ಷಣೆಗಾಗಿ ಭಾರತ ಸರ್ಕಾರ 1972ರಲ್ಲಿ [(Wildlife (Protection)Act)] ರಲ್ಲಿ ಬೇಟೆಯನ್ನು ನಿಷೇಧ ಮಾಡಿದೆ. ಕಾಡುಪ್ರಾಣಿಗಳನ್ನು ಬೇಟೆಯಾಡುವುದು ಕಾನೂನಿನ ಪ್ರಕಾರ ಅಪರಾಧ ಎಂದು ಪರಿಗಣಿಸಲ್ಪಟ್ಟಿದೆ. ಆದುದರಿಂದ ಕೆಡ್ಡಸದ ಆಚರಣೆಯಲ್ಲಿ ಕಾಡುಪ್ರಾಣಿಗಳ ಬೇಟೆ ಅಸಾಧ್ಯ. ಕಾಡುಕೋಳಿ ಅಥವಾ ಮನೆಯಲ್ಲಿಯೇ ಸಾಕಿದ ಕೋಳಿಯನ್ನು ಸಾಂಕೇತಿಕವಾಗಿ ಅಡಿಗೆ ಮಾಡುತ್ತಾರೆ.

ಆಧುನೀಕರಣದ ಪ್ರಭಾವ ಎಲ್ಲವನ್ನು ಸ್ಥಿತ್ಯಂತರಕ್ಕೆ ಒಳಗಾಗಿಸಿದೆ. ಮನುಷ್ಯನ ದೈನಂದಿನ ವ್ಯವಹಾರ ಆಗುಹೋಗುಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಲಿದೆ. ವಾಹನಗಳ ಸಂಖ್ಯೆ ಹೆಚ್ಚಾಗಿದೆ. ವಾಹನಗಳ ಸಂಖ್ಯೆ ಹೆಚ್ಚಾದಾಗ ರಸ್ತೆ ನಿರ್ಮಾಣ ಕಾರ್ಯವನ್ನು ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಕೆಲವೊಮ್ಮೆ ಭೂಮಿಯನ್ನು ರಸ್ತೆ ನಿರ್ಮಾಣ ಕೆಲಸಕ್ಕಾಗಿ ಬಿಟ್ಟುಕೊಡುವುದು ಅನಿವಾರ್ಯವಾಗುತ್ತದೆ. ಕೈಗಾರೀಕರಣದಿಂದಾಗಿ ಇದ್ದ ಭೂಮಿಯಲ್ಲಿ ಇಂದು ದೊಡ್ಡ ಕಾರ್ಖಾನೆಗಳು ಕಟ್ಟಡಗಳು ಉದ್ಭವಿಸಿವೆ.

ಆದುದರಿಂದ ಇಂದು ಭೂಮಿಯ ಆಚರಣೆ ಅಲ್ಲಲ್ಲಿ ಕಡಿಮೆಯಾಗತೊಡಗಿದೆ. ಅಪಾರ್ಟ್‌ಮೆಂಟ್‌ಗಳಲ್ಲಿ ವಾಸವಾಗಿರುವವರು ಕೆಡ್ಡಸದ ಆಚರಣೆಯ ವಿಧಿವಿಧಾನಗಳನ್ನು ಅನುಸರಿಸುವುದು ಸಾಧ್ಯವಿಲ್ಲ. ಆದುದರಿಂದ ಕೆಡ್ಡಸ ಬದಲಾವಣೆಯಾಗಿದೆ. ಆದರೆ ಕೆಲವೊಂದು ಹೊಸತನಕ್ಕೆ ಕೆಲವೊಂದು ಬದಲಾವಣೆಗಳು ಅನಿವಾರ್ಯ ಎಂದಾದರೂ ಆಚರಣೆಯ ಅರಿವಿಲ್ಲದೆ ಇರುವುದು ಆತಂಕ ಉಂಟು ಮಾಡುತ್ತಿದೆ. ತುಳುನಾಡಿನ ಎಲ್ಲ ಆಚರಣೆಗಳಲ್ಲಿ ಪ್ರಮುಖವಾಗಿ ಕಾಡಿನ ಪಾತ್ರ ಇದ್ದೇ ಇರುತ್ತದೆ. ಆದರೆ ಇಂದು ಕಾಡುಗಳು ನಾಶವಾಗಿ ಪ್ರಾಣಿಪಕ್ಷಿಗಳ ಸಂಖ್ಯೆ ಕಡಿಮೆಯಾಗಿದೆ. ಕೆಡ್ಡಸದ ಆಚರಣೆಯಲ್ಲಿ ಬೇಟೆಯಲ್ಲಿ ಕಂಡುಬರುವ ಪುಂಡದ ಹಕ್ಕಿಯ ಹೆಸರನ್ನು ಕೂಡ ಕೇಳಲಿಕ್ಕೆ ಸಾಧ್ಯವಿಲ್ಲ ಇಂದು ಹಲವಾರು ಆಚರಣೆಗಳಲ್ಲಿ ಕಂಡುಬರುವ ಮರಗಳನ್ನು ಪ್ರಾಣಿ ಪಕ್ಷಿಗಳನ್ನು ಚಿತ್ರಪಟದಲ್ಲಿ ಮಾತ್ರ ನೋಡಲು ಸಾಧ್ಯ.

**ಇಂದು ಕೆಡ್ಡಸದ ಆಚರಣೆಗಳು**

ಇಂದು ಕೆಡ್ಡಸವನ್ನು ಸಾಂಕೇತಿಕವಾಗಿ ಮಾತ್ರ ಆಚರಿಸಲಾಗುತ್ತದೆ. ಕೆಲವೊಂದು ಹಳ್ಳಿಗಳಲ್ಲಿ ಕೆಡ್ಡಸವನ್ನು ಆಚರಿಸುತ್ತಾರೆ. ಪುತ್ತೂರಿನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಆ ಗ್ರಾಮದ ಸುಮಲತರವರು ಕೆಡ್ಡಸವನ್ನು ಆಚರಣೆ ಮಾಡುತ್ತೇವೆ ಆದರೆ ಹಿಂದಿನ ಕ್ರಮವನ್ನು ಹಳ್ಳಿಯಾದರೂ ಪಾಲಿಸಲಾಗುವುದಿಲ್ಲ ಎಂದರು. ಕೆಡ್ಡಸದ ಬೆಳಗ್ಗಿನ ಜಾವ ಅಂಗಳಕ್ಕೆ ಸೆಗಣಿ ಸಾರಿಸಿ ಅರಿಶಿನ ಕುಂಕುಮ, ಕುಡುವರಿ ಇಟ್ಟು ಮೂರು ದಿನ ಪೂಜೆ ಮಾಡುತ್ತೇವೆ ಎಂದರು. ಬೋಂಟೆಯ ಪ್ರಸಂಗವಿಲ್ಲ ಎಂದರು.

ಚೇಳ್ಯಾರಿನ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಲೋಕೇಶ್ ಎಂಬ ನಿವಾಸಿ ಕೆಡ್ಡಸದ ಆಚರಣೆ ಇದೆ. ಕೆಡ್ಡಸದ ಬೋಂಟೆಯಲ್ಲಿ ಇಂದು ಸಾಂಕೇತಿಕವಾಗಿ ನಾವು ಕಾಡುಕೋಳಿಯನ್ನು ಬೇಟೆಯಾಡಿ ತಂದು ಮಾಡುತ್ತೇವೆ. ಹಿಂದಿನ ಕಾಲದ ಆಚರಣೆಯನ್ನು ಮಾಡಲು ಇಂದು ಕಾಡುಗಳಿಲ್ಲ ಹಾಗೂ ಬೇಟೆಯಲ್ಲಿ ಆಸಕ್ತಿಯು ಇಲ್ಲ ಎಂದರು.

ಒಟ್ಟಿನಲ್ಲಿ ಹೇಳುವುದಾದರೆ ತುಳುನಾಡಿನ ಪ್ರಮುಖ ಆಚರಣೆಯಾಗಿರುವ ಕೆಡ್ಡಸ ಭೂಮಿಯ ವಿಶೇಷ ಆಚರಣೆಯಾಗಿದ್ದು, ಭೂಮಿತಾಯಿಗೆ ವಿಶೇಷವಾಗಿ ಪೂಜಿಸಿ ಕೃತಜ್ಞತೆ ಸಲ್ಲಿಸಿ ಭೂಮಿತಾಯಿಯಲ್ಲಿ ಮುಂದಿನ ಬೆಳೆ ಮತ್ತಷ್ಟು ಫಲವಂತಿಕೆಯಾಗಿ ನಾಡು ಸಮೃದ್ಧಿಯಾಗುವಂತೆ ಭೂಮಿತಾಯಿಯನ್ನು ಪ್ರಾರ್ಥಿಸುವ ಆಚರಣೆ ಎಂದು ಹೇಳಬಹುದು.

ಇಲ್ಲಿ ಕೆಡ್ಡಸದ ಆಚರಣೆಯ ಸಂದರ್ಭದಲ್ಲಿ ಕಂಡುಬರುವ ವಿಧಿವಿಧಾನಗಳಲ್ಲಿ ಇಂದು ಸ್ಥಿತ್ಯಂತರ ಉಂಟಾಗಿದೆ ಹೊರತು ಆಚರಣೆ ಇನ್ನೂ ಕೂಡ ಅಸ್ತಿತ್ವದಲ್ಲಿದೆ.

**ಪರಮಾರ್ಶನ ಗ್ರಂಥಗಳು** (REFERENCES)


1. ಡಾ. ದಿವಾಕೊಕ್ಕಡ: ತುಳುನಾಡಿನ ಆಚರಣೆಗಳು ವಾರ್ಷಿಕ ಆವರ್ತನದ ಸಾಂಸ್ಕೃತಿಕ ಅಧ್ಯಯನ
2. ಕೆ.ಎಲ್.ಕುಂಡತ್ತಾಯ: ನೆಲಮೂಲದ ಹಬ್ಬಗಳು
3. The Hindu (ಪತ್ರಿಕೆ): Worshipping mother earth through Keddasa
4. ಕನ್ನಡಪ್ರಭ (ಪತ್ರಿಕೆ): ಭೂಮಿ ತಾಯಿ ರಜಸ್ವಲೆಯಾಗುವ ಹಬ್ಬ
5. ವಿಜಯಕರ್ನಾಟಕ (ಪತ್ರಿಕೆ): ಕೆಡ್ಡಸ ತುಳುವೆರೆನ ನಾಡ ಪರ್ಬೊ ಆವೊಡು
6. Daijiworld (ಪತ್ರಿಕೆ) : Keddasa Tulunadu's Rich Tradition to Venerate Mother Earth
7. ಡಾ. ನಿಕೇತನ : ತುಳುಸಾಹಿತ್ಯ ಪರಂಪರೆ ಒಂದು ಅವಲೋಕನ
8. ರಘುನಾಥ ಎಂ.ವರ್ಕಾಡಿ : ಓಪತ್ತಿ ಮಾಲೆ
9. ಶ್ರೀಧರ ಟಿ.ಎನ್. : ತುಳುವರ ಪರ್ಬ
10. ಡಾ.ಕೆ.ಚಿನ್ನಪ್ಪ ಗೌಡ: ಸೇರಿಗೆ
11. ಜೆ.ತಿಮ್ಮಪ್ಪ ಪೂಜಾರಿ : ತುಳುವೆರೆ ರೀತಿ ರಿವಾಜಿಲು ಬೊಕ್ಕ ಪದ್ನಾಜಿ ಸಂಸ್ಕಾರೊಲು
12. ಡಾ.ಹರಿಶ್ಚಂದ್ರ ಪಿ.ಸಾಲಿಯಾನ್ ಮುಲ್ಕಿ :ತುಳುನಾಡಿನ ಕಟ್ಟುಕಟ್ಟಳೆಗಳು


**ಉಲ್ಲೆಖಗಳು**

1. ಬೆನೆಟ್ ಅಮ್ಮಣ: ಮಾಜಿ ಸದಸ್ಯರು, ಕರ್ನಾಟಕ ತುಳು ಸಾಹಿತ್ಯ ಆಕಾಡೆಮಿ
2. ಕೆ.ಎಲ್.ಕುಂಡತ್ತಾಯ : ಲೇಖಕರು
3. ಶ್ರೀಮತಿ ವಿಜಯ ಶೆಟ್ಟಿ : ಮಾಜಿ ಸದಸ್ಯರು, ಕರ್ನಾಟಕ ತುಳು ಸಾಹಿತ್ಯ ಆಕಾಡೆಮಿ